ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 12-12-1978.

# *ಪರೋಪಕಾರಿ ಆಗುವುದು ಹೇಗೆ?*

(परोपकारी कैसे बनें?)

***ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಗುಣಗಳ ಸಾಗರನು, ಸದಾದಾತ, ಸರ್ವಶಕ್ತಿವಂತನಾದ ಶಿವ ಬಾಬಾ ಮಾತನಾಡುತ್ತಿದ್ದಾರೆ.**

ಇಂದು ಆತ್ಮಿಕ ಹೂದೋಟ ಎಂದರೆ ಸದಾ ಆತ್ಮಿಕ ಗುಲಾಬಿ ಆಗಿರುವ ಮಕ್ಕಳ ಸಂಘಟನೆಯನ್ನು ನೋಡಿ ಬಾಪ್‌ದಾದಾ ಪ್ರತಿಯೊಬ್ಬರ ವಿಶೇಷತೆಯನ್ನು ನೋಡುತ್ತಿದ್ದಾರೆ. ಮೂರು ಪ್ರಕಾರದ ವಿಶೇಷತೆಗಳಿವೆ. ಮೊದಲನೆಯದಾಗಿ 1.ಸದಾ ಆತ್ಮೀಯತೆಯ ಸ್ಥಿತಿಯಲ್ಲಿ ಇರುವವರು ಎಂದರೆ ಅರಳಿರುವ ಗುಲಾಬಿ. ಎರಡನೆಯದಾಗಿ 2.ಆತ್ಮೀಯತೆಯ ಸ್ಥಿತಿಯ ಅನುಸಾರವಾಗಿ ಸದಾಕಾಲ ಅರಳಿರುವವರಲ್ಲ, ಆದರೆ ನಿಶ್ಚಯಸ್ವರೂಪರಾಗಿರುವ ಕಾರಣದಿಂದ ರೂಪದ ಸೌಂದರ್ಯವು ಚೆನ್ನಾಗಿರುತ್ತದೆ. 3. ಮೂರನೆಯ ಪ್ರಕಾರವಾಗಿ ತಂದೆಯೊಂದಿಗೆ ಸ್ನೇಹ ಹಾಗೂ ಸಂಬಂಧದ ಆಧಾರದಿಂದ ಅರ್ಧ ಅರಳಿರುವವರಾಗಿದ್ದರೂ ಸಹ ಸ್ನೇಹ ಹಾಗೂ ಸಂಬಂಧದ ಸುಗಂಧವು ಹರಡುತ್ತದೆ. ಇಂತಹ ಮೂರೂ ಪ್ರಕಾರದ ಆತ್ಮಿಕ ಗುಲಾಬಿಗಳ ಹೂದೋಟವನ್ನು ನೋಡುತ್ತಾ ಬಾಪ್‌ದಾದಾ ಸದಾ ಸುವಾಸನೆಯನ್ನು ತೆಗೆದುಕೊಳ್ಳುತ್ತಿದ್ದಾರೆ. ನಾನು ಯಾರಾಗಿದ್ದೇನೆ ಎಂದು ನಿಮ್ಮನ್ನು ನೀವು ನೋಡಿಕೊಳ್ಳಿರಿ. ಪ್ರಥಮ ಸ್ಥಾನದವರಾಗುವುದರಲ್ಲಿ ಏನು ಕೊರತೆ ಉಳಿದಿದೆಯೋ ಅದನ್ನು ಸಂಪನ್ನ ಮಾಡಿಕೊಂಡು ಸಂಪೂರ್ಣ ಆಗಿರಿ. ಏಕೆಂದರೆ ಸಂಪೂರ್ಣ ತಂದೆಯ ಮಕ್ಕಳೂ ಸಹ ತಂದೆಯ ಸಮಾನ ಸಂಪೂರ್ಣರಾಗಿಬಿಡಬೇಕು. ಮಕ್ಕಳಲ್ಲಿ ಪ್ರತಿಯೊಬ್ಬರ ಲಕ್ಷ್ಯವೂ ಸಹ ಸಂಪೂರ್ಣರಾಗಬೇಕು ಎಂಬುದಾಗಿದೆ. ಆದ್ದರಿಂದ ಲಕ್ಷ್ಯದ ಅನುಗುಣವಾಗಿ ಸರ್ವಲಕ್ಷಣಗಳನ್ನೂ ಸ್ವಯಂ ನಿಮ್ಮಲ್ಲಿ ತುಂಬಿಕೊಂಡು ಸಂಪೂರ್ಣ ಆಗಿರಿ. ಇದರ ಸಲುವಾಗಿ ಮಾಡಬೇಕಾದ ವಿಶೇಷ ಧಾರಣೆಯನ್ನು ಆಗಲೇ ತಿಳಿಸಿದ್ದೇನೆ. ಅದೇನೆಂದರೆ ಸದಾ ಬ್ರಹ್ಮಾಚಾರಿ ಎಂದರೆ ಬ್ರಹ್ಮಚಾರಿ ಹಾಗೂ ಪರೋಪಕಾರಿ ಆಗುವುದು.

ಪರೋಪಕಾರಿಯ ಪರಿಭಾಷೆಯು ಸಹಜವೂ ಆಗಿದೆ ಹಾಗೂ ಅತಿ ಗುಹ್ಯವೂ ಆಗಿದೆ. (1) ಪರೋಪಕಾರಿ ಎಂದರೆ ಪ್ರತಿಯೊಂದು ಸಮಯದಲ್ಲಿ ತಂದೆಯ ಸಮಾನ ಪ್ರತಿಯೊಂದು ಆತ್ಮರ ಗುಣವನ್ನೇ ನೋಡುವವರು. (2) ಪರೋಪಕಾರಿಯು ಯಾರ ದೌರ್ಬಲ್ಯ ಅಥವಾ ಅವಗುಣವನ್ನು ನೋಡಿದರೂ ತಮ್ಮ ಶುಭಭಾವನೆಯಿಂದ ಸಹಯೋಗದ ಕಾಮನೆಯಿಂದ ಗುಣವಂತರನ್ನಾಗಿ ಮಾಡುವ ಶಕ್ತಿಯನ್ನು ಕೊಡುವರು. (3) ಪರೋಪಕಾರಿ ಎಂದರೆ ಸದಾ ತಂದೆಯ ಸಮಾನ ಸ್ವಯಂ ತಮ್ಮ ಖಜಾನೆಗಳನ್ನು ಸರ್ವ ಆತ್ಮರಿಗೆ ನೀಡುವ ದಾತಾ ಸ್ವರೂಪರಾಗಿ ಇರುವವರು. (4) ಪರೋಪಕಾರಿಯು ಸದಾ ಸ್ವಯಂ ತಮ್ಮ ಖಜಾನೆಗಳಿಂದ ಸಂಪನ್ನ, ಬೇಗಂಪುರದ ಚಕ್ರವರ್ತಿ ಆಗಿದ್ದೇನೆ ಎನ್ನುವ ಅನುಭವವನ್ನು ಮಾಡುವರು. ಬೇಗಂಪುರ ಎಂದರೆ ಯಾವ ಚಿಂತೆ(ದುಃಖವೂ) ಇರುವುದಿಲ್ಲ. ಅಂತಹ ಸ್ಥಾನ, ಸಂಕಲ್ಪದಲ್ಲಿಯೂ ಸಹ ದುಃಖದ ಸಂಸ್ಕಾರದ ಅನುಭವ ಆಗುವುದಿಲ್ಲ. (5)ಪರೋಪಕಾರಿ ಎಂದರೆ ಸದಾ ವಿಶೇಷತೆಯಿಂದ ತಮ್ಮ ಮಾನಸಾ ಎಂದರೆ ಸಂಕಲ್ಪ ಶಕ್ತಿಯ ಮೂಲಕ, ವಾಚಾ ಶಕ್ತಿಯ ಮೂಲಕ ತಮ್ಮ ಸಂಗಧದ ರಂಗಿನ ಮೂಲಕ, ಸಂಬಂಧದ, ಸ್ನೇಹದ ಮೂಲಕ, ಖುಷಿ(ಸಂತೊಷ)ದ ಖಜಾನೆಯ ಅಖಂಡ ಭಂಡಾರದ ಮೂಲಕ, ಅಖಂಡ ದಾನವನ್ನು ಮಾಡುತ್ತಾ ಇರುತ್ತಾರೆ. ಯಾವ ಆತ್ಮ ಅವರ ಸಂಪರ್ಕದಲ್ಲಿ ಬಂದರೂ ಖುಷಿಯ ಖಜಾನೆಯಿಂದ ಸಂಪನ್ನವಾಗಿ ಹೋಗುತ್ತಾರೆ. ಪರೋಪಕಾರಿ ಇಂತಹ ಅಖಂಡ ದಾನಿ ಆಗಿರುವರು. ವಿಶೇಷ ಸಮಯದಲ್ಲಿ ಸಂಪರ್ಕದಲ್ಲಿ ಬರುವವರಿಗೆ ಅರ್ಥಾಥ್ ಕೆಲವು ಆತ್ಮರಿಗೆ ಮಾತ್ರ ದಾನಿ ಆಗುವುದಲ್ಲ ಸರ್ವರಿಗೂ ಸದಾ ದಾನ ಮಾಡುವ ಮಹಾದಾನಿ ಆಗಿರುತ್ತಾರೆ. ಪರೋಪಕಾರಿಯು ಸ್ವಯಂ ಎಲ್ಲದರಲ್ಲಿಯೂ ಸಂಪನ್ನ ಆಗಿರುವ ಕಾರಣದಿಂದ ಯಾವುದೇ ಆತ್ಮನಿಂದ ಏನಾದರು ತೆಗೆದುಕೊಂಡು ಅದಕ್ಕೆ ಪ್ರತಿಯಾಗಿ ಕೊಡುವ ಇಚ್ಛೆಯುಳ್ಳವರಾಗುವುದಿಲ್ಲ. ಅವರು ಇದನ್ನು ಮಾಡಿದರೆ ನಾನು ಅದನ್ನು ಮಾಡುವೆನು ಎನ್ನುವುದು ಅವರ ಸಂಕಲ್ಪದಲ್ಲಿಯೂ ಬರುವುದಿಲ್ಲ. ಅವರು ಬದಲಾವಣೆ ಆದರೆ ನಾನೂ ಬದಲಾವಣೆ ಆಗುವೆನು, ಅವರಲ್ಲಿ ಸ್ವಲ್ಪ ಪರಿವರ್ತನೆ ಆಗಲಿ, ಆಮೇಲೆ ನಾನು ಸ್ವಲ್ಪ ಪರಿವರ್ತನೆ ಆಗಿ ಬಿಡುವೆನು, ಅನ್ಯ ಆತ್ಮರು ಒಂದು ವಿಷಯದಲ್ಲಿ ಪರಿವರ್ತನೆಯಾದರೆ ನಾನು ಕೆಲವು ಅಂಶಗಳಲ್ಲಿ ಪರಿವರ್ತನೆ ಆಗುವೆನು ಮೊದಲಾದ ಭಾವನೆ ಗಳನ್ನು ಇಟ್ಟುಕೊಳ್ಳುವವರನ್ನು ಪರೋಪಕಾರಿ ಎಂದು ಕರೆಯಲಾಗುವುದಿಲ್ಲ. ಅಂತಹವರು ಮಹಾದಾನಿ ಆಗುವುದಕ್ಕೆ ಬದಲಾಗಿ ಚೌಕಾಸಿ ಮಾಡುವ ವ್ಯಾಪಾರಿಗಳಾಗಿಬಿಡುತ್ತಾರೆ. "ಅವರು ಇಷ್ಟು ಕೊಟ್ಟರೆ ನಾನು ಇಷ್ಟು ಕೊಡುವೆನು. ಸದಾ ನಾನೇ ತಲೆ ಬಾಗುತ್ತಿರಬೇಕೇ, ನಾನೇ ಕೊಡುತ್ತಾ ಇರಬೇಕೇ, ಎಲ್ಲಿಯ ತನಕ ಎಷ್ಟು ಸಮಯದವರೆಗೆ ಹೀಗೆ ಮಾಡುತ್ತಾ ಇರಲಿ? ಎನ್ನುವ ಸಂಕಲ್ಪದಿಂದ ಕೊಡುವ ದಾತನದಾಗಲು ಸಾಧ್ಯವಿಲ್ಲ. ಇತರಾತ್ಮರು ಯಾವುದಾದರೂ ದೌರ್ಬಲ್ಯದ ವಶವಾಗಿದ್ದರೂ, ಸಂಸ್ಕಾರದ ವಶವಾಗಿದ್ದರೂ, ಸ್ವಭಾವದ ವಶವಾಗಿದ್ದರೂ, ಪ್ರಕೃತಿಯ ಸಾಧನಗಳವಶವಾಗಿದ್ದರೂ, ಅಂತಹ ಪರವಶ ಆತ್ಮ ಎಂದರೆ ಆ ಸಮಯದಲ್ಲಿ ಭಿಕಾರಿ ಆಗಿರುವ ಆತ್ಮ, ಭಿಕಾರಿ ಎಂದರೆ ಶಕ್ತಿಹೀನ, ಶಕ್ತಿಗಳ ಭಂಡಾರವು ಖಾಲಿ ಆಗಿರುತ್ತದೆ.

ಮಹಾದಾನಿಯು ಭಿಕಾರಿಯಿಂದ ಒಂದು ಪೈಸಾವನ್ನೂ ತೆಗೆದು ಕೊಳ್ಳುವ ಇಚ್ಛೆಯನ್ನು ಇಟ್ಟುಕೊಳ್ಳುವುದು ಅಸಂಭವ. "ಇವರು ಪರಿವರ್ತನೆ ಆಗಲಿ, ಅಥವಾ ಇದನ್ನು ಮಾಡಲಿ ಅಥವಾ ಇವರು ಸ್ವಲ್ಪ ಸಹಯೋಗವನ್ನು ಕೊಡಲಿ, ಹೆಜ್ಜೆ, ಮುಂದಿಡಲಿ" ಎನ್ನುವ ಸಂಕಲ್ಪವನ್ನು ಅಥವಾ ಅಂತಹ ಸಹಯೋಗದ ಭಾವನೆಯನ್ನು ಪರವಶ ಶಕ್ತಿಹೀನ, ಭಿಕಾರಿ ಆತ್ಮನಿಂದ ಇಟ್ಟುಕೊಳ್ಳಬಹುದೇ?. ಏನಾದರೂ ಸ್ವಲ್ಪ ತೆಗೆದುಕೊಂಡು ಅದಕ್ಕೆ ಪ್ರತಿಯಾಗಿ ಸ್ವಲ್ಪ ಕೊಡುವವರನ್ನು ಪರೋಪಕಾರಿ ಎಂದು ಕರೆಯುವುದಿಲ್ಲ. (7) ಪರೋಪಕಾರಿ ಎಂದರೆ ನಿರ್ಗತಿಕನನ್ನು ಸಿರಿವಂತರನ್ನಾಗಿ ಮಾಡುವವರು ಅಪಕಾರಿಗೂ ಉಪಕಾರ ಮಾಡುವವರು, ನಿಂದೆ ಮಾಡುವವರನ್ನು ಆಲಂಗಿಸಿಕೊಳ್ಳುವವರು, ತಮ್ಮ ಪರೋಪಕಾರದ ಶುಭ ಭಾವನೆಯಿಂದ, ಸ್ನೇಹದಿಂದ ಶಕ್ತಿಯಿಂದ, ಮಧುರ ವಚನದಿಂದ, ಉತ್ಸಾಹ, ಉಲ್ಲಾಸದ ಸಹಯೋಗದಿಂದ ಹತಾಶನನ್ನು ಶಕ್ತಿವಂತನನ್ನಾಗಿ ಮಾಡುವವರೆಂದರೆ ನಿರ್ಗತಿಕನನ್ನು(ಬಿಕಾರಿ) ಚಕ್ರವರ್ತಿಯನ್ನಾಗಿ ಮಾಡುವವರು. (8) ಪರೋಪಕಾರಿಯು ತ್ರಿಕಾಲದರ್ಶಿ ಆಗಿರುವ ಕಾರಣದಿಂದ ಪ್ರತಿಯೊಂದು ಆತ್ಮನ ಸಂಪೂರ್ಣ ಸಹಯೋಗವನ್ನು ಮುಂದೆ ಇಟ್ಟುಕೊಂಡು ಪ್ರತಿಯೊಂದು ಆತ್ಮನ ದೌರ್ಬಲ್ಯಗಳನ್ನು ಗುರುತಿಸುತ್ತಾ ಆ ದೌರ್ಬಲ್ಯವನ್ನು ಸ್ವಯಂ ಧಾರಣೆ ಮಾಡುವುದಿಲ್ಲ. ಅದಕ್ಕೆ ಬದಲಾಗಿ ಅನ್ಯ ಆತ್ಮರ ದೌರ್ಬಲ್ಯದ ಮುಳ್ಳನ್ನು ತಮ್ಮ ಕಲ್ಯಾಣಕಾರಿ

ಸ್ವರೂಪದಿಂದ ನಿರ್ಮೂಲ ಮಾಡಿಬಿಡುವರು. ಮುಳ್ಳುಗಳನ್ನೂ ಸಹ ಹೂವುಗಳನ್ನಾಗಿ ಮಾಡಿಬಿಡುವರು. ಅಂತಹ ಪರೋಪಕಾರಿಯು ಸದಾ ಸಂತುಷ್ಟಮಣಿಯ ಸಮಾನ ಸ್ವಯಂ ತಾವೂ ಸಹ ಸಂತುಷ್ಟರಾಗಿರುವರು ಹಾಗೂ ಸರ್ವರನ್ನೂ ಸಂತುಷ್ಟರನ್ನಾಗಿ ಮಾಡುತ್ತಾರೆ. ನಿರಾಶಾದಾಯಕ ಆತ್ಮರಲ್ಲಿಯೂ ಭರವಸೆಯನ್ನು ಉತ್ಪನ್ನ ಮಾಡುವುದೇ ಮಹತ್ಕಾರ್ಯ ಆಗಿದೆ. (9)ಯಾರ ಬಗ್ಗೆ ಎಲ್ಲರೂ ನಿರಾಶೆಯನ್ನು ವ್ಯಕ್ತ ಮಾಡುತ್ತಾರೋ ಅಂತಹ ವ್ಯಕ್ತಿ ಅಥವಾ ಅಂತಹ ಸ್ಥಿತಿಯಲ್ಲಿ ಚಿರಕಾಲದವರೆಗೆ ಅವರ ಆಶಯದ ದೀಪವನ್ನು ಬೆಳಗಿಸಬೇಕು. ನಿಮ್ಮ ಜಡಮೂರ್ತಿಗಳೇ ಇಲ್ಲಿಯವರೆಗೆ ಅನೇಕ ಆತ್ಮರ ಅಲ್ಪಕಾಲದ ಮನೋಕಾಮನೆಗಳನ್ನು ಪೂರ್ಣ ಮಾಡುತ್ತಿರುವಾಗ ಚೈತನ್ಯರೂಪದಲ್ಲಿ ಒಂದುವೇಳೆ ನಿಮ್ಮ ಸಹಯೋಗಿ ಅಥವಾ ಸಹೋದರಿ ಆದ ಪರಿವಾರದ ಆತ್ಮರಲ್ಲಿ ಯಾರಾರೂ ಸಣ್ಣ ಮಕ್ಕಳ ಹಠದಿಂದ ಅಲ್ಪಕಾಲದ ವಸ್ತುವನ್ನು ಸದಾಕಾಲದ ಪ್ರಾಪ್ತಿ ಎಂದು ತಿಳಿದು ಅಲ್ಪಕಾಲದ ಕೀರ್ತಿ, ಗೌರವ ಹೆಸರು ಅಥವಾ ಅಲ್ಪಕಾಲದ ಪ್ರಾಪ್ತಿಯ ಇಚ್ಛೆಯನ್ನು ಇಟ್ಟುಕೊಂಡಿದ್ದರೆ ಬೇರೆಯವರಿಗೆ ಮಾನ್ಯತೆಯನ್ನು ಕೊಟ್ಟು ಸ್ವಯಂ ನೀವು ನಿರಹಂಕಾರಿ(ನಿರ್ಮಾಣ) ಆಗುವುದೇ ಪರೋಪಕಾರ ಆಗಿದೆ. ಹೀಗೆ ಮಾನ್ಯತೆಯನ್ನು ಕೊಡುವುದೇ ಸದಾಕಾಲದವರೆಗೆ ತೆಗೆದುಕೊಳ್ಳುವುದಾಗಿದೆ. ಹೇಗೆ ಮುಗ್ಧ ಮಗುವು ನಷ್ಟವನ್ನುಂಟುಮಾಡುವ ವಸ್ತುವನ್ನೂ ಸಹ ಆಟದ ವಸ್ತು ಎಂದು ತಿಳಿದುಕೊಳ್ಳುವುದರಿಂದ ಅದಕ್ಕೆ ಬೇರೆ ಏನನ್ನಾದರೂ ಕೊಟ್ಟು ಆ ನಷ್ಟದಾಯಕ ವಸ್ತುವನ್ನು ತ್ಯಜಿಸುವಂತೆ ಮಾಡಬೇಕಾಗುತ್ತದೆ. ಹಠದಿಂದ ಸದಾ ಕಾಲದ ನಷ್ಟ ಆಗಿಬಿಡುತ್ತದೆ. ಹಾಗೆಯೇ ತಿಳಿವಳಿಕೆ ಇಲ್ಲದ ಆತ್ಮರೂ ಸಹ ಅಲ್ಪಕಾಲದ ಪ್ರಾಪ್ತಿಯನ್ನು ಎಂದರೆ ಸದಾ ಕಾಲದ ನಷ್ಟವನ್ನುಂಟುಮಾಡುವ ಪ್ರಾಪ್ತಿಯನ್ನು ತಮ್ಮ ಕಲ್ಯಾಣದ ಸಾಧನವೆಂದು ತಿಳಿದುಕೊಳ್ಳುತ್ತಾರೆ. ಅಂತಹ ಆತ್ಮರನ್ನು ಬಲವಂತದಿಂದ ಈ ಸಾಧನಗಳಿಂದ ದೂರ ಮಾಡಿದರೆ ತಳಮಳದಿಂದ ಅವರ ಪುರುಷಾರ್ಥದ ಜೀವನವು ಕೊನೆ ಆಗಿಬಿಡುತ್ತದೆ. ಆದ್ದರಿಂದ ಏನಾದರೂ ಸ್ವಲ್ಪ ಕೊಟ್ಟು ಸದಾಕಾಲದವರೆಗೆ ಬಿಡಿಸುವ ಯುಕ್ತಿಯುಕ್ತ ನಡವಳಿಕೆಯಿಂದ ತಾನಾಗಿಯೇ ಅಲ್ಪಕಾಲದ ವಿಕಾರಿ ಆತ್ಮವು ತಿಳಿವಳಿಕೆ ಇಲ್ಲದಿರುವುದು ತಿಳಿವಳಿಕೆಯುಳ್ಳದ್ದಾಗುವುದು. ಇದು ಅಲ್ಪಕಾಲದ ಸಾಧನ ಆಗಿದೆ ಎನ್ನುವುದನ್ನು ಸ್ವಯಂ ತಾನೇ ಅರಿತುಕೊಳ್ಳುವುದು. ಅಂತಹ ತಿಳಿವಳಿಕೆ ಇಲ್ಲದ ಆತ್ಮರ ಬಗ್ಗೆಯೂ ಸಹ ಪರೋಪಕಾರಿ ಆಗಬೇಕು. ಇಂತಹ ಪರೋಪಕಾರಿಯು ತಾನಾಗಿಯೇ ಸ್ವಯಂ ಉಪಕಾರಿ ಆಗಿಬಿಡುತ್ತಾರೆ. ಕೊಡುವುದೇ ಸ್ವಯಂ ತಮಗೆ ದೊರೆಯುವುದು ಆಗಿಬಿಡುತ್ತದೆ. ಮಹಾದಾನಿಯೇ ಸ್ವತಹ ಸರ್ವಾಧಿಕಾರಿ ಆಗಿಬಿಡುತ್ತಾರೆ. ಪರೋಪಕಾರಿಯ ಪರಿಭಾಷೆ ಏನು ಎನ್ನುವುದನ್ನು ತಿಳಿಯಿತೇ?

ಇಂತಹ ಪರೋಪಕಾರಿಯೇ ಸರ್ವ ಆತ್ಮರ ಮೂಲಕ ಹೃತ್ಪೂರ್ವಕ ಆಶೀರ್ವಾದಕ್ಕೆ ಅಧಿಕಾರಿ ಆಗುತ್ತಾರೆ. ಅಂತಹ ಪರೋಪಕಾರಿ ಆತ್ಮರ ಮೇಲೆ ಸದಾ ಸರ್ವಾತ್ಮರ ಮೂಲಕ ಪ್ರಶಂಸೆಯ ಹೂಗಳ ಮಳೆಯು ಬೀಳುತ್ತದೆ. ತಿಳಿಯಿತೇ. ಒಳ್ಳೆಯದು.

**ಇಂತಹ ತಂದೆಯ ಸಮಾನ ಸದಾ ಉಪಕಾರಿ, ಸ್ವಯಂ ಹಾಗೂ ಸರ್ವರ ಬಗ್ಗೆ ಸದಾ ಶುಭಭಾವನೆ, ಶ್ರೇಷ್ಠ ಇಚ್ಛೆ ಇಟ್ಟುಕೊಳ್ಳುವವರು ಅಖಂಡ ಖಜಾನೆಯ ಮಾಲೀಕರು ಅಖಂಡದಾನಿ, ಹತಾಶರನ್ನು ಶಕ್ತಿಶಾಲಿಗಳನ್ನಾಗಿ ಮಾಡುವವರು, ನಿರ್ಗತಿಕರನ್ನು ಸದಾ ಕಾಲದ ಚಕ್ರವರ್ತಿಯನ್ನಾಗಿ ಮಾಡುವವರು ಅದ ಶ್ರೇಷ್ಠ ಆತ್ಮರಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

**ದೀದಿಯವರೊಂದಿಗೆ**: ಬಾಪ್ ದಾದಾರವರಿಗೆ ಅಂತ್ಯವನ್ನೇ ಆದಿ ಮಾಡುವಂತಹ ಸರ್ವತೋಮುಖ ಪಾತ್ರಧಾರಿ, ಪರೋಪಕಾರಿ ತಂಡವು ಬೇಕಾಗಿದೆ. ಹೇಗೆ ಪ್ರತಿಯೊಂದು ವಿಶೇಷ ಕಾರ್ಯದ ಸಲುವಾಗಿ ತಂಡವನ್ನು ರಚಿಸುತ್ತೀರಲ್ಲವೇ. ಹಾಗೆಯೇ ಈ ಸಮಯದಲ್ಲಿ ಎಂತಹ ಪರೋಪಕಾರಿ ತಂಡವು ಬೇಕಾಗಿದೆ ಎಂದರೆ ದಾನಕೊಡುವ ದಾತಾ ಆಗಬೇಕು. ಹೇಗೆ ರಾಜರು ದಾತಾ ಆಗಿರುತ್ತಾರೆ. ಈಗಿನಕಾಲದ ರಾಜರಲ್ಲ. ಸಂಪನ್ನ ರಾಜರು ಸದಾ ಪ್ರಜೆಗಳಿಗೆ ನೀಡುವವರಾಗಿರುತ್ತಾರೆ. ಒಂದುವೇಳೆ ಪ್ರಜೆಗಳಿಂದ ತೆಗೆದುಕೊಳ್ಳುವವರಾದರೆ ಪ್ರಜೆಯೇ ರಾಜ ಆಗಿಬಿಡುತ್ತಾನೆ. ಆದ್ದರಿಂದ ಸಂಪನ್ನ ರಾಜರು ಎಂದೂ ತೆಗೆದುಕೊಳ್ಳುವುದಿಲ್ಲ, ಕೊಡುವವರಾಗಿರುತ್ತಾರೆ. ಸಂಪನ್ನ ರಾಜರುಗಳ ಕೈ ಎಂದೂ ತೆಗೆದುಕೊಳ್ಳುವ ಕೈ ಆಗುವುದಿಲ್ಲ. ಕೊಡುವ ಹಸ್ತ ಆಗಿರುವುದು. ಸ್ವರ್ಗದ

ವಿಶ್ವಮಹಾರಾಜರು ತನ್ನ ಪ್ರಜೆಗಳಿಂದ ತೆಗೆದುಕೊಳ್ಳುವರೇನು? ಪ್ರಜೆಯೂ ಸಹ ಸಂಪನ್ನ ಆಗಿರುವಾಗ ವಿಶ್ವದ ಮಾಹಾರಾಜನು ಏನು ಆಗಿರುವನು? ಆದ್ದರಿಂದ ಹೇಗೆ ಭವಿಷ್ಯದಲ್ಲಿ ದಾತಾ ಆಗುವ ಪಾತ್ರವನ್ನು ಅಭಿನಯಿಸಬೇಕಾಗಿದೆಯೋ ಆ ಯಾರಿಂದಲಾದರೂ ಯಾವುದಾದರೂ ಸೌಕರ್ಯವನ್ನು ತೆಗೆದುಕೊಂಡು ಅಮೇಲೆ ಅವರಿಗೆ ಸೌಕರ್ಯವನ್ನು ಒದಗಿಸೋಣ ಎನ್ನುವುದು ಸಂಕಲ್ಪದಲ್ಲಿಯೂ ಇರಬಾರದು. ಇದನ್ನು ಕರೆಯಲಾಗುತ್ತದೆ. ಸ್ವಯಂ ಇಚ್ಛೆ ತೆಗೆದುಕೊಳ್ಳುವ ಅಲ್ಪಕಾಲದ ಇಚ್ಛೆಯನ್ನು ತ್ಯಜಿಸುವ, ನಿರ್ಗತಿಕ ಆಗುವುದು ಎಂದು ಉಳ್ಳವರಲ್ಲ. ಅಲ್ಪಕಾಲದ ಸಾಧನಗಳನ್ನು ಸ್ವೀಕಾರ ಮಾಡದಿರುವ ನಿರ್ಗತಿಕ ಆಗಬೇಕೆ ಇಂತಹ ನಿರ್ಗತಿಕರೇ ಸಂಪನ್ನಮೂರ್ತಿ ಆಗುವರು. ಒಂದುಕಡೆ ನಿರ್ಗತಿಕ ಮತ್ತೊಂದು ಕಡೆ ಸಂಪನ್ನ, ಈಗಲೇ ನಿರ್ಗತಿಕರಿಂದ ರಾಜಕೂಮಾರ್ ಅಗುವ ಪಾತ್ರವನ್ನು ಪ್ರತ್ಯಕ್ಷದಲ್ಲಿ ಅಭಿನಯಿಸುವ ಆತ್ಮರನ್ನು ಸದಾ ತ್ಯಾಗಿ ಹಾಗೂ ಸದಾ ಭಾಗ್ಯಶಾಲಿ ಎಂದು ಕರೆಯಲಾಗುತ್ತದೆ. ತ್ಯಾಗದಿಂದ ಸದಾಕಾಲದ ಭಾಗ್ಯವು ತಾನಾಗಿಯೇ ರೂಪುಗೊಳ್ಳುತ್ತದೆ. ತ್ಯಾಗಮಾಡಿದರೆ ಅದೃಷ್ಟದ ರೇಖೆಯು ಮೂಡುತ್ತದೆ. ಸ್ವಯಂ ತಮಗಾಗಿ ಇಚ್ಛಾಮಾತ್ರಂ ಅವಿದ್ಯಾ ಆಗಿರುವವರು ಅಖಂಡದಾನಿ ಆಗಿರುವಂತಹ ಪರೋಪಕಾರಿ ತಂಡವು ಬೇಕಾಗಿದೆ. ಹೇಗೆ ತಂದೆಯು ತಮ್ಮ ಸಮಯವನ್ನೂ ಸಹ ಸೇವೆಯಲ್ಲಿ ವಿನಿಯೋಗಿಸಿದರು ಎಂಬುದನ್ನು ನೋಡಿದಿರಿ. ಸ್ವಯಂ ನಿರಹಂಕಾರಿ ಆಗಿ ಮಕ್ಕಳಿಗೆ ಮಾನ್ಯತೆಯನ್ನು ಕೊಟ್ಟರು. ಮಕ್ಕಳನ್ನು ಮೊದಲು ಮುಂದಿಟ್ಟರು. ಹೆಸರು ಮಕ್ಕಳದು ಕಾರ್ಯವು ತಂದೆಯದು ಕಾರ್ಯದ ಕೀರ್ತಿ ಪ್ರಾಪ್ತಿಯ ತ್ಯಾಗ ಮಾಡಿದರು. ಹೆಸರಿನಲ್ಲಿಯೂ ಪರೋಪಕಾರಿ ಆದರು. ತಮ್ಮದನ್ನು ತ್ಯಾಗಮಾಡಿ ಇತರರ ಹೆಸರನ್ನು ಮುಂದೆ ಮಾಡಿದರು. ಸ್ವಯಂ ತಮ್ಮನ್ನು ಸದಾ ಸೇವಾಧಾರಿ ಮಾಡಿಕೊಂಡರು. ಇದನ್ನೇ ಪರೋಪಕಾರಿಗುಣ ಎಂದು ಕರೆಯುವುದು. ಮಕ್ಕಳನ್ನು ಮಾಲಿಕರ ಸ್ಥಾನದಲ್ಲಿ ಇಟ್ಟರು ಹಾಗೂ ಸ್ವಯಂ ತಮ್ಮನ್ನು ಸೇವಾಧಾರಿ ಆಗಿ ಇಟ್ಟುಕೊಂಡರು. ಆದ್ದರಿಂದ ಮಾಲಿಕತನದ ಗೌರವವನ್ನೂ ಸಹ ಕೊಟ್ಟುಬಿಟ್ಟರು, ಕೀರ್ತಿಯನ್ನೂ ಕೊಟ್ಟುಬಿಟ್ಟರು. ಹೆಸರನ್ನೂ ಕೊಟ್ಟುಬಿಟ್ಟರು. ಎಂದೂ ತಮ್ಮ ಹೆಸರನ್ನು ಹೇಳಿ ಕೊಳ್ಳಲಿಲ್ಲ. ಹೇಗೆ ತಂದೆಯು ಹೆಸರು, ಕೀರ್ತಿ, ಗೌರವ ಎಲ್ಲದರ ತ್ಯಾಗ ಮಾಡಿದರೋ, ಪರೋಪಕಾರ ಮಾಡಿದ್ದರೋ, ಸ್ವಯಂ ತಮ್ಮ ಸುಖವು ಮಕ್ಕಳ ಸುಖದಲ್ಲಿ ಇದೆ ಎಂದು ತಿಳಿದರೋ, ಮಕ್ಕಳ ವಿಸ್ಮೃತಿಯ ಕಾರಣದಿಂದ ದುಃಖದ ಅನುಭವವು ಆದರೆ ಅದನ್ನು ತಮ್ಮ ದುಃಖವೆಂದು ತಿಳಿದುಕೊಳ್ಳಲಿಲ್ಲ. ಇದನ್ನೇ ಮಕ್ಕಳ ತಪ್ಪನ್ನೂ ಸಹ ತಮ್ಮ ತಪ್ಪೆಂದು ತಿಳಿದು ನೀತಿಪಾಲನೆ ಮಾಡುವವರಾಗಿ ಪರೋಪಕಾರಿಯ ಗುಣ ಎಂದು ಕರೆಯಲಾಗುತ್ತದೆ.

ಈಗಿನ ಕಾಲದಲ್ಲಿ ಅಂತಹ ತಂಡದ ಅಗತ್ಯವಿದೆ. ಇತರರ ದೌರ್ಬಲ್ಯ, ದೋಷಗಳನ್ನು ಕೊನೆಮಾಡಿ ಶಕ್ತಿಯನ್ನು ನೀಡುತ್ತಾ ಹೋಗ ಬೇಕು ಎಲ್ಲರೂ ಇಂತಹವರಾಗಿಬಿಟ್ಟರೆ ಏನಾಗಿಬಿಡುವುದು? ನಿಮ್ಮ ಸಮಯದ ಉಳಿತಾಯವಾಗುವುದು. ಆಗ ಹೇಗೆ ಹಾಗೂ ಯಾರೊಂದಿಗೆ ಎನ್ನುವುದೆಲ್ಲವು ಕೊನೆ ಆಗಿಬಿಡುವುದು. ಆತ್ಮೀಯ ಮಿಲನ ಆಗುವುದು. ವಿಶ್ವಕಲ್ಯಾಣದ ಕಾರ್ಯದಲ್ಲಿ ತೀವ್ರಗತಿ ಆಗಿಬಿಡುವುದು. ಈಗಲಾದರೋ ಎಷ್ಟೊಂದು ವಿಮಾನಗಳನ್ನು ತಯಾರಿಸಬೇಕಾಗುತ್ತದೆ. ಅನೇಕ ವಿಮಾನಗಳು ಅಥವಾ ಮಾರಕಾಸ್ತ್ರಗಳು ಕಾರ್ಯವನ್ನು ಮಾಡದೆಯೇ ನಾಶವಾಗಿಬಿಡುತ್ತವೆ. ಹೇಗೆ ಬಾಂಬುಗಳು ಒಮ್ಮೊಮ್ಮೆ ಸ್ಫೋಟಗೊಳ್ಳುವುದೇ ಇಲ್ಲ. ಇದ್ದಲ್ಲಿಯೇ ನಾಶವಾಗಿಬಿಡುತ್ತವೆ. ಆದರೆ ವಿಶ್ವಕಲ್ಯಾಣದ ತೀವ್ರಗತಿಯಲ್ಲಿ ಇಂತಹ ಸಮಯದಲ್ಲಿ ಈ ಕಾರ್ಯವು ನಡೆಯಬೇಕು ಎಂದು ಸಂಕಲ್ಪ ಮಾಡಿದಕೂಡಲೇ ನಾಲ್ಕೂ ಕಡೆ ನಿಮಿತ್ತ ಮಾತ್ರವಾಗಿ ಕಾರ್ಯವನ್ನು ಮಾಡಲಾಗುತ್ತದೆ ಹಾಗೂ ಕಾರ್ಯವು ಯಶಸ್ವಿಯಾಗಿ ಪ್ರಖ್ಯಾತ ಆಗಿಬಿಡುವುದು. ಹೇಗೆ ಸದಾ ತಂದೆಯನ್ನು ನೋಡಿದಿರಿ, ಅವರಲ್ಲಿ ಜ್ಞಾನದ ಅಧಿಕಾರದ ಜೊತೆ ಜೊತೆಗೆ ಜ್ಞಾನದ ಮೂಲಕ ಅನುಭೂತಿ ಮೂರ್ತಿಯ ಅಧಿಕಾರವು ಇತ್ತು. ಆ ಅಧಿಕಾರದ ಕಾರಣದಿಂದ ಪ್ರತಿಯೊಂದು ಮಾತಿನಲ್ಲಿ ಜ್ಞಾನದ ಜೊತೆಜೊತೆಗೆ ಅನುಭವವೂ ಇತ್ತು. ಹೀಗೆ ಅವರಲ್ಲಿ ಡಬಲ್ ಅಧಿಕಾರ ಇತ್ತೋ. ಹಾಗೆಯೇ ಮಕ್ಕಳಲ್ಲಿ ಪ್ರತಿಯೊಬ್ಬರೂ ಡಬಲ್ ಅಧಿಕಾರದಿಂದ ಏನಾದರೂ ಹೇಳಿದರೆ ಅನುಭವದ ಬಾಣವು ಜ್ಞಾನದ ಅಧಿಕಾರದ ಬಾಣವು ಒಂದು ಸೆಕೆಂಡ್‌ನಲ್ಲಿ ಪ್ರಭಾವ ಬೀರುವುದು. ಸ್ವರೂಪ ಹಾಗೂ ನುಡಿ ಎರಡೂ ಅಧಿಕಾರಯುತ ಆಗಿದ್ದರೆ ಆಗ ಸಫಲತೆಯು ತಾನಾಗಿಯೇ ಆಗಿಬಿಡುವುದು. ಇಲ್ಲದಿದ್ದರೆ ಜ್ಞಾನವೇನೋ ತುಂಬಾ ಚೆನ್ನಾಗಿದೆ, ಶ್ರೇಷ್ಠವಾಗಿದೆ ಆದರೆ ಧಾರಣೆ ಮಾಡುವುದು ಕಷ್ಟ ಎಂದೇ ಹೇಳುತ್ತಿರುತ್ತಾರೆ. ಆದ್ದರಿಂದ ಧಾರಣಾಮೂರ್ತಿ, ಧಾರಣಾ

ಸ್ವರೂಪ ಆಗಿ ಪ್ರತ್ಯಕ್ಷದಲ್ಲಿ ಕಂಡುಬರಬೇಕು. ಪ್ರತ್ಯಕ್ಷಪ್ರಮಾಣವನ್ನು ಗ್ರಹಿಸುವುದು ಸಹಜ ಆಗಿಬಿಡುತ್ತದೆ. ಆದ್ದರಿಂದ ಡಬಲ್ ಆಗಿರುವಂತಹ ತಂಡ ಆಗಬೇಕು. ಅವರನ್ನು ಅಮಲೇರಿದ ಭಿಕಾರಿಗಳೆಂದು ಕರೆಯಲಾಗುತ್ತದೆ. ಯಾವುದೇ ಇಚ್ಛೆಯೂ ಇರಬಾರದು. ಒಳ್ಳೆಯದು.

**ತಂಡಗಳ ಜೊತೆಯಲ್ಲಿ:**

1. ತಂದೆಗೆ ಪ್ರೀತಿಪಾತ್ರ ಆಗಲು ಸಹಜ ಸಾಧನ ಯಾವುದೆಂದರೆ ಅತೀತ ಆಗುವುದು. ಹೇಗೆ ಕಮಲಪುಷ್ಪವು ಸದಾಕಾಲ ಕೆಸರಿನಿಂದ ದೂರ ಹಾಗೂ ಎಲ್ಲರಿಗೂ ಪ್ರೀತಿಪಾತ್ರ ಆಗಿದೆಯೋ ಹಾಗೆಯೇ ನೀವು ಸದಾ ಕಮಲದ ಸಮಾನ ಅತೀತರಾಗಿರುತ್ತೀರಾ? ಪ್ರವೃತ್ತಿಯಲ್ಲಿರುತ್ತಾ ಪ್ರಪಂಚದ ವಾತಾವರಣದಲ್ಲಿ ಇರುತ್ತಾ ವಾತಾವರಣದಿಂದ ಅನಾಸಕ್ತರು ಆಗಬೇಕು, ತಂದೆಗೆ ಪ್ರೀತಿ ಪಾತ್ರರು ಯಾರು ಆಗುತ್ತಾರೆಂದರೆ ಅತೀತ ಆಗಿರುವವರು ಎಷ್ಟು ಅತೀತರೋ ಅಷ್ಟು ಪ್ರೀತಿಪಾತ್ರರಾಗುತ್ತೀರಿ. ಅತೀತತೆಯ ಆಧಾರದ ಮೇಲೆಯೇ ಪ್ರೀತಿಪಾತ್ರರಾಗುವುದರಲ್ಲಿ ಕ್ರಮ ಸಂಖ್ಯೆಯು ನಿಗದಿ ಆಗುತ್ತದೆ. ಅತಿ ಅತೀತರಾದರೆ ಅತಿ ಪ್ರೀತಿಪಾತ್ರರಾಗುತ್ತೀರಿ.

2. ನಿಮ್ಮ ಪೂಜ್ಯ ಸ್ವರೂಪದ ಸ್ಮೃತಿಯಿಂದ ತಾನಾಗಿಯೇ ಸೇವೆಯು ನಡೆಯುವುದು: ಸದಾ ನಿಮ್ಮ ಕಲ್ಪದ ಹಿಂದಿನ ಜ್ಞಾಪಕಾರ್ಥ ಚಿತ್ರವನ್ನು ನೋಡುತ್ತಾ ಸ್ತುತಿಯನ್ನು ಕೇಳುತ್ತಾ ಇದು ನಮ್ಮ ಸ್ತುತಿಯೇ ನಡೆಯುತ್ತಾ ಇದೆ ಎನ್ನುವ ನಶೆ ಇರುತ್ತದೆಯೇ. ಯಾವುದಾದರೂ ಜ್ಞಾಪಕಾರ್ಥ ಸ್ಥಾನಕ್ಕೆ ಹೋದಾಗ ಇದು ನನ್ನ ಜ್ಞಾಪಕಾರ್ಥವಾಗಿಯೇ ರಚನೆಯಾಗಿದೆ ಎನ್ನುವ ನಶೆ ಇರುತ್ತದೆಯೇ, ಚೈತನ್ಯದಲ್ಲಿ ನಿಮ್ಮ ಜಡ ಜ್ಞಾಪಕಾರ್ಥ ಚಿತ್ರವನ್ನು ಈಗ ನೋಡುತ್ತಾ ಇರುವುದೇ ಅದ್ಭುತವಾದ ಘಟನೆ ಆಗಿದೆ. ಒಂದು ಕಡೆ ಜಡಚಿತ್ರ ಇದೆ, ಮತ್ತೊಂದು ಕಡೆ ನಾವು ಗುಪ್ತವಾಗಿ ಚೈತನ್ಯದಲ್ಲಿ ಇದ್ದೇವೆ, ಎಷ್ಟೊಂದು ಭಕ್ತರು ನಮ್ಮನ್ನು ಕರೆಯುತ್ತಿದ್ದಾರೆ. ನಾನು ಪೂಜ್ಯ ಆಗಿದ್ದೇನೆ ಎಂದು ತಿಳಿದುಕೊಂಡರೆ ಭಕ್ತರ ಮೇಲೆ ದಯೆಯು ಉತ್ಪನ್ನವಾಗುವುದು. ಭಕ್ತರು ನಿರ್ಗತಿಕರು ಅಥವಾ ಭಿಕಾರಿಗಳು ಹಾಗೂ ಅಥವಾ ಭಿಕಾರಿಗಳು ಹಾಗೂ ನೀವು ಸಂಪನ್ನ ಆಗಿದ್ದೀರಿ. ಆದ್ದರಿಂದ ಭಕ್ತರನ್ನು ನೋಡಿ ಕನಿಕರ ಆಗುತ್ತದೆಯೇ, ಭಕ್ತರಿಗೆ ಭಕ್ತಿಯ ಫಲವನ್ನು ಕೊಡಿಸಲು ನಿಮಿತ್ತ ಆಗಬೇಕು ಎನ್ನುವ ಇಚ್ಛೆ ಉತ್ಪನ್ನ ಆಗುತ್ತದೆಯೇ. ಸೇವೆಯಲ್ಲಿ ಸದಾ ಉತ್ಸಾಹ, ಉಲ್ಲಾಸ ಇರುತ್ತದೆಯೇ. ಸೇವೆಯಿಂದ ಅನೇಕರ ಕಲ್ಯಾಣವೂ ಆಗುತ್ತದೆ ಹಾಗೂ ಭವಿಷ್ಯಕ್ಕಾಗಿ ಸಂಗ್ರಹವೂ ಆಗುತ್ತದೆ. ಪ್ರತಿಯೊಂದು ಆತ್ಮಕ್ಕೂ ಒಂದು ಹಿಡಿಯಷ್ಟಾದರೂ ನೀಡಲೇಬೇಕು. ಬರಿಗೈಯಲ್ಲಿ ಕಳುಹಿಸಬಾರದು. ನಿಮ್ಮ ಪೂಜ್ಯ ಸ್ವರೂಪವನ್ನು ಸ್ವತಿಯಲ್ಲಿಟ್ಟುಕೊಂಡರೆ ನೀವು ಬಯಸದಿದ್ದರೂ ಸಹ ಸದಾ ಸೇವೆಯಲ್ಲಿ ತತ್ಪರರಾಗಿರುವಿರಿ.

3. ಘನತೆಯುಳ್ಳ (ರಾಯಲ್) ಮಕ್ಕಳು ಎಂದರೆ ಪ್ರೀತಿಪಾತ್ರ ಮಕ್ಕಳ ಕೊಡುಗೆ ಏನೆಂದರೆ ದೇಹಾಭಿಮಾನರೂಪಿ ಮಣ್ಣಿನಿಂದ ದೂರ ಇರುವುದು, ಯಾರು ಪದಮಾಪದಮ್ ಭಾಗ್ಯಶಾಲಿ ಆತ್ಮರಾಗಿದಾರೋ ಅವರು ಸದಾ ಆನಂದದ ಉಯ್ಯಾಲೆಯಲ್ಲಿ ಉಯ್ಯಾಲೆ ಆಡುತ್ತಾರೆ. ಅವರ ಬುದ್ಧಿರೂಪಿ ಕಾಲು ಕೆಳಗೆ ಬರುವುದಿಲ್ಲ. ಯಾರು ಪ್ರೀತಿಪಾತ್ರ ಬಹಳಕಾಲದಿಂದ ಅಗಲಿಹೋಗಿ ಸಿಕ್ಕಿರುವ ಮಕ್ಕಳಾಗಿರುತ್ತಾರೋ ಅವರು ಸದಾ ಮಡಿಲಿನಲ್ಲಿ ಇರುತ್ತಾರೆ, ಕೆಳಗೆ ಕಾಲು ಇಡುವುದಿಲ್ಲ. ರತ್ನಗಂಬಳಿಯ ಮೇಲೆ ಕಾಲು ಇಡುತ್ತಾರೆ. ನೀವು ಪದಮಾಪದಮ್ ಭಾಗ್ಯಶಾಲಿ ಬಹಳಕಾಲದಿಂದ ಅಗಲಿಹೋಗಿದ್ದು ಸಿಕ್ಕಿರುವ ಮಕ್ಕಳ ಬುದ್ಧಿರೂಪಿ ಕಾಲು ಸದಾ ದೇಹಾಭಿಮಾನ ಅಥವಾ ದೇಹದ ಪ್ರಪಂಚದ ಸ್ಮೃತಿಯಿಂದ ಮೇಲ್ಮಟ್ಟದಲ್ಲಿರಬೇಕು. ಬಾಪ್ ದಾದಾ ಮಣ್ಣಿನಿಂದ ಮೇಲೆತ್ತಿ ಸಿಂಹಾಸನದ ಮೇಲೆ ಕೂರಿಸಿದ್ದಾರೆ ಮತ್ತೇಕೆ ಸಿಂಹಾಸನವನ್ನು ಬಿಟ್ಟು ಮಣ್ಣಿನಲ್ಲಿ ಬರುತ್ತೀರಿ. ದೇಹಾಭಿಮಾನದಲ್ಲಿ ಬರುವುದು ಎಂದರೆ ಮಣ್ಣಿನಲ್ಲಿ ಆಡುವುದು. ಸಂಗಮಯುಗವು ವರ್ಧಿಸುವ ಕಲೆಯ ಯುಗ ಆಗಿದೆ. ಈಗ ಕ್ಷೀಣಿಸುವ ಕಲೆಯ ಸಮಯವು ಪೂರ್ತಿ ಆಯಿತು, ಸ್ವಲ್ಪ ಸಮಯ ಮಾತ್ರ ಇನ್ನೂ ಮೇಲೆ ಹತ್ತಲು ಉಳಿದಿದೆ. ಆದ್ದರಿಂದ ನೀವು ಕೆಳಗೆ ಏಕೆ ಬರುತ್ತೀರಿ. ಸದಾ ಮೇಲೆಯೇ ಇರಿ. ಒಳ್ಳೆಯುದು, ಓಂ ಶಾಂತಿ.

ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ12-12-1978.

***ಪರೋಪಕಾರಿ ಆಗುವುದು ಹೇಗೆ***

ಸದಾ ಆತ್ಮೀಯತೆಯ ಸ್ಥಿತಿಯಲ್ಲಿದ್ದಾಗ ಅರಳಿರುವ ಗುಲಾಬಿಯಂತೆ ಕಾಣುತ್ತೀರಿ. ಸಂಪೂರ್ಣವಾಗಬೇಕೆಂಬ ಲಕ್ಷ್ಯದೊಂದಿಗೆ ಲಕ್ಷಣಗಳನ್ನು ಕೂಡ ಸ್ವಯಂನಲ್ಲಿ ಧಾರಣೆ ಮಾಡಿಕೊಂಡು ಸಂಪನ್ನವಾಗಿರಿ. ಮೊದಲ ಒಂದು ಮುರಳಿಯಲ್ಲಿ (07-12-1978) ಸದಾ ಬ್ರಹ್ಮಚಾರಿ ಮತ್ತು ಪರೋಪಕಾರಿ ಎಂಬ ವಿಷಯದ ಬಗ್ಗೆ ತಿಳಿಸಿದಾಗ ಪರೋಪಕಾರಿಯ ಬಗ್ಗೆ ನಂತರ ಹೇಳುತ್ತೇನೆ ಎಂದು ಪರಮಾತ್ಮ ಈ ಮುರಳಿಯಲ್ಲಿ ತಿಳಿಸಿದ್ದಾರೆ. ಪರೋಪಕಾರಿ ಎಂದರೆ ಸದಾ ತಂದೆಯ ಸಮಾನವಾಗಿ ಪ್ರತಿ ಆತ್ಮನಲ್ಲಿ ಗುಣಗಳನ್ನು ನೋಡಬೇಕು, ಯಾರ ಬಲಹೀನತೆಯನ್ನಾದರೂ ಶುಭ ಭಾವನೆಯ ಶಕ್ತಿಯನ್ನು ಕೊಟ್ಟು ಗುಣವಂತನನ್ನಾಗಿ ತಯಾರು ಮಾಡಿ, ತಮ್ಮ ಸರ್ವ ಖಜಾನೆಗಳನ್ನು ಸರ್ವಾತ್ಮರಿಗೆ ದಾತನ ರೂಪದಲ್ಲಿ ನೀಡುತ್ತಾ, ಬೇಗಂಪುರದ ಚಕ್ರವರ್ತಿಯಾಗಿದ್ದು, ಸಂಕಲ್ಪದ ಶಕ್ತಿಯಿಂದ, ವಾಣಿಯ ಶಕ್ತಿಯಿಂದ, ಸಾಂಗತ್ಯದ ರಂಗಿನಿಂದ, ಸಂಬಂಧದ ಸ್ನೇಹದಿಂದ, ಸದಾ ಸಂತೋಷದ ಅವಿನಾಶಿ ಖಜಾನೆಯನ್ನು ಅಖಂಡದಾನ ಮಾಡುತ್ತಾ, ಸಂಪರ್ಕದಲ್ಲಿ ಬಂದಿರುವ ಪ್ರತಿಯೊಂದು ಆತ್ಮನಿಗೆ ಸಂತೋಷದ ಖಜಾನೆಯಿಂದ ಸಂಪನ್ನವಾಗಿ ತಯಾರು ಮಾಡಿ, ನಿರ್ಗತಿಕರನ್ನು ಸಿರಿವಂತರನ್ನಾಗಿ ಮಾಡಿ, ತ್ರಿಕಾಲದರ್ಶಿಯಾಗಿ ಇರುತ್ತಾ, ಎಲ್ಲರಿಂದ ನಿರಾಶೆಯನ್ನು ಪಡೆದಿರುವ ಆತ್ಮನನ್ನು ಆಶಾದೀಪದಂತೆ ತಯಾರು ಮಾಡುವವರೇ ಪರೋಪಕಾರಿಗಳು, - ಎಂದು ಹೇಳುತ್ತಾ ಪರಮಾತ್ಮ ಹೇಳಿರುವ ಮಹಾವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಆತ್ಮೀಯತೆಯ ಸ್ಥಿತಿಯಿಂದ ಸದಾ ಅರಳಿರುವ ಆತ್ಮಿಕ ಗುಲಾಬಿ.

2. ನಾನು ತಂದೆಯ ಸಮಾನವಾಗಿ ಸಂಪೂರ್ಣವಾಗಬೇಕೆಂಬ ಲಕ್ಷ್ಯವನ್ನು ಇಟ್ಟುಕೊಂಡು ಲಕ್ಷಣಗಳನ್ನು ಸ್ವಯಂನಲ್ಲಿ ಧಾರಣೆ ಮಾಡಿಕೊಂಡಿರುವ ಸಂಪೂರ್ಣ ಸಂಪನ್ನ ಸ್ವರೂಪ.

3. ನಾನು ತಂದೆಯ ಸಮಾನವಾಗಿ ಎಲ್ಲರ ಗುಣಗಳನ್ನು ನೋಡುತ್ತಾ, ಶುಭ ಭಾವನೆ, ಸಹಯೋಗದ ಕಾಮನೆಯೊಂದಿಗೆ ಗುಣವಂತನಾಗಿ ಶಕ್ತಿಯ ದಾನವನ್ನು ಕೊಡುತ್ತಾ, ಸ್ವಯಂನ ಪ್ರತಿಯೊಂದು ಖಜಾನೆಗಳನ್ನು ಸರ್ವಾತ್ಮರಿಗೆ ಕೊಡುವ ದಾತನಾಗಿ, ಸದಾ ಸ್ವಯಂನ್ನು ಸರ್ವ ಖಜಾನೆಗಳಿಂದ ಸಂಪನ್ನವಾಗಿ, ಬೇಗಂಪುರಿಯ ಚಕ್ರವರ್ತಿಯ ಅನುಭವ ಮಾಡಿಕೊಂಡು, ಮನಸಾ ಸಂಕಲ್ಪದಿಂದ, ವಾಣಿಯಿಂದ, ಸಾಂಗತ್ಯದ ರಂಗಿನಿಂದ, ಸಂಬಂಧದ ಸ್ನೇಹದಿಂದ, ಸಂತೋಷದ ಖಜಾನೆಯನ್ನು ಅಖಂಡ ಮಹಾದಾನ ಮಾಡಿರುವ ಪರೋಪಕಾರಿ.

4. ನಾನು ನಿರ್ಗತಿಕರನ್ನು ಸಂಪನ್ನವಾಗಿ (ಸಿರಿವಂತ) ಮಾಡಿ, ಅಪಕಾರಿಗೆ ಉಪಕಾರ ಮಾಡಿ ನಿಂದಿಸುವವರನ್ನು ಆಲಿಂಗನ ಮಾಡಿಕೊಂಡಿದ್ದೇನೆ.

5. ನಾನು ನನ್ನ ಶುಭ ಭಾವನೆಯಿಂದ, ಸ್ನೇಹದಿಂದ, ಶಕ್ತಿಯಿಂದ, ಮಧುರ ಮಾತಿನಿಂದ, ಉಲ್ಲಾಸ ಉತ್ಸಾಹಗಳ ಸಹಯೋಗದಿಂದ, ಬಲಹೀನ ಆತ್ಮರನ್ನು ಶಕ್ತಿವಂತರನ್ನಾಗಿ, ನಿರ್ಗತಿಕರನ್ನು ಚಕ್ರವರ್ತಿಯನ್ನಾಗಿ ತಯಾರು ಮಾಡಿದ್ದೇನೆ.

6. ನಾನು ಪ್ರತಿಯೊಂದು ಬಲಹೀನತೆಯನ್ನು ಪರಿಶೀಲಿಸಿ ಬಲಹೀನತೆ ಎಂಬ ಮುಳ್ಳನ್ನು ಕಲ್ಯಾಣಕಾರಿ ಸ್ವರೂಪದಲ್ಲಿ ನಿರ್ಮೂಲನೆ ಮಾಡಿರುವ ತ್ರಿಕಾಲ ದರ್ಶಿ.

6. ನಾನು ಸಂತುಷ್ಟವಾಗಿ ಇರುತ್ತಾ ಸರ್ವರನ್ನು ಸಂತುಷ್ಟ ಮಾಡಿ ನಿರಾಸೆಯಲ್ಲಿರುವವರಿಗೆ ಆಸೆಯನ್ನು ಉತ್ಪನ್ನ ಮಾಡಿದ್ದೇನೆ.

7. ನಾನು ಎಂತಹ ಅಲ್ಪಕಾಲಿಕ ಪ್ರಾಪ್ತಿಯನ್ನು ಬೇಡುವವರಿಗಾದರೂ ಗೌರವವನ್ನು ಕೊಟ್ಟು ಸ್ವಯಂ ನಿರ್ಮಾಣ ಸ್ಥಿತಿಯಲ್ಲಿ ಇದ್ದೇನೆ.

8. ನಾನು ಪರೋಪಕಾರಿಯಾಗಿ ಇರುತ್ತಾ ಸ್ವತಹವಾಗಿ ನನ್ನ ಉಪಕಾರ ಮಾಡಿಕೊಂಡು, ಕೊಡುವುದರಿಂದ ತೆಗೆದುಕೊಂಡ ಮಹಾದಾನಿ.

9. ನಾನು ಸರ್ವಾತ್ಮರಿಂದ ಮನಸ್ಸಿನ ಆಶೀರ್ವಾದಗಳಿಗೆ ಅಧಿಕಾರಿಯಾಗಿ, ಸರ್ವಾತ್ಮರಿಂದ ಪ್ರಶಂಸೆಗಳ ಹೂವಿನ ಮಳೆಯನ್ನು ಪಡೆದಿರುವ ಪರೋಪಕಾರಿ.